ಉದ್ದವಿದ್ದ ಕೆಲವು ಮೂಗುಗಳು ಮತ್ತಷ್ಟು ಉದ್ದಾಗುವುದು ನೋಡುವುದಕ್ಕೆ ಮಜಾ ಎನಿಸುತ್ತಿತ್ತು. ಆದರೆ ಅಂತಹ ಅಪೇಕ್ಷೆಯ ಕ್ಷಣಗಳು ಮಾತ್ರ ಬಹಳ ಕ್ಷಣಿಕವಾಗಿರುತ್ತಿದ್ದವು. ಅವು ಹೀಗೆ ಕಾಣಿಸಿಕೊಂಡು ಹಾಗೆ ಹೊರಟುಬಿಡುತ್ತಿದ್ದವು. ಮಿಂಚು ಮೂಡಮೂಡುತ್ತಲೆ ಮಾಯವಾದಂತೆ ಮಳೆ ಬಂತು ಬಂತು ಎನ್ನುವಾಗಲೆ ನಾಲ್ಕಾರು ಹನಿ ಉದುರಿಸಿ ಮಾಯವಾಗಿರುತ್ತಿತ್ತು. ಕೋಟೆಯಂತೆ ಕಟ್ಟಿದ ಮೋಡ ಕ್ಷಣಮಾತ್ರದಲ್ಲಿ ಕರಗಿ ನೀಲಿಯಾಕಾಶ ಫಳಫಳ ಹೊಳೆಯುತ್ತಿತ್ತು. ಜನರ ಮುಖದಲ್ಲಿರಳಿದ ಹೂವುಗಳು ಬಾಡಿರುತ್ತಿದ್ದವು. ಸಂಜೆಯಾದರೂ ಇನ್ನು ಮಧ್ಯಾಹ್ನವೇ ಎನ್ನುವ ಹಾಗೆ ಹೊರಗೆ ಕಾವು. ಬೆಂಕಿಯನ್ನು ನೆಲಕ್ಕೆ ಸುರಿದಿರುವರೇನೋ ಎನ್ನುವಂತೆ ಕಾಲಿಟ್ಟಲ್ಲಿ ಧಗಧಗ. ಮೈಯಲ್ಲಿ ಮನಸ್ಸನ್ನು ಕಂಗೆಡಿಸುವ ಝಳ.

ಸೂರ್ಯನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಲಂತೂ ಸಾಧ್ಯವಿಲ್ಲ, ಸರಿ. ಆದರೆ ಭೂಮಿಯ ಮೇಲೆ ಬಿದ್ದಿರುವ ಅವನ ಸುಡುಬಿಸಿಲನ್ನು ಎದುರಿಸಲಾರದೆ ಕಣ್ಣುಗಳು ತಮಗೆ ತಾವೆ ಮುಚ್ಚಿಕೊಳ್ಳುತ್ತವೆ. ಮೊನ್ನೆ ಮೊನ್ನೆ ಯಾರದೋ ಕಣ್ಣಪಾಪೆಗಳು ಬಿಳಿಯಾಗಿಬಿಟ್ಟವು ಎಂಬ ಸುದ್ದಿಗೆ ಹೆದರಿದ ಜನರು ಇತ್ತೀಚೆಗೆ ಮುಗಿಲ ಕಡೆಗೆ ನೋಡುವುದನ್ನೆ ಬಿಟ್ಟಿದ್ದಾರೆ. ತುಂಬಿ ಹರಿಯುವ ಹಳ್ಳದಲ್ಲಿ ಎಮ್ಮೆಗಳ ಮೈತೊಳೆದು ತುಸು ಹೊತ್ತು ಅವುಗಳನ್ನು ನೀರಲ್ಲಿಯೆ ಮಲಗಲು ಬಿಟ್ಟು, ತಾವೂ ದೊಡ್ಡ ಕಲ್ಲಿನ ಮೇಲೆ ಕುಳಿತು ಮೈತೊಳೆದುಕೊಂಡು, ಮಿರಿಮಿರಿ ಮಿಂಚುವ ಉಸುಕಿನಿಂದ ಕೈಕಾಲು ಉಜ್ಜಿಕೊಂಡು, ಉಸುಕಿನಲ್ಲಿ ಬಿಸಲಿಗೆಂದು ಮೈಚೆಲ್ಲುತ್ತಿದ್ದ ಹರೆಯದ ಹುಡುಗರ ಮಲ್ಲೂರಿನ ಆ ದಿನಗಳು ವರ್ಷದ ಹಿಂದೆಯೇ ಮುಗಿದುಹೋದವು ಎನಿಸುತ್ತದೆ. ಬತ್ತಿರುವ ಹಳ್ಳದ ಸೇತುವೆಯ ಮೇಲೆ ನಡೆದುಹೋಗುವಾಗಲೆಲ್ಲ ಅನೇಕರು ಮಮ್ಮಲ ಮರುಗುತ್ತಾರೆ. ಎಂದೂ ಮಳೆ ಆಗಿಲ್ಲವೇನೋ ಎನ್ನುವ ರೀತಿಯಲ್ಲಿ ಹಳ್ಳ ಒಣಗಿ ನಿಂತಿದೆ. ಮಾಯಕ್ಕ ಕೂಡ ಅದೇ ನೆನಪಿನಿಂದ ಅಲ್ಲವೆ ಈ ಹಳ್ಳವನ್ನು ಮತ್ತೆ ಹರಿಯುವಂತೆ ಮಾಡುತ್ತೇನೆಂದು ಶಪಥ ಮಾಡಿದ್ದು?

ಹಳ್ಳ ಹರಿಯುವುದಷ್ಟೇ ಅಲ್ಲ, ಊರ ಮುಂದಿನ ನದಿಯಲ್ಲಿ ನೀರು ಮತ್ತೆ ಹರಿದು, ಹೆಂಗಸರು ಬಟ್ಟೆಗಳನ್ನು ಮೊದಲಿನ ಹಾಗೆ ನದಿಯ ಕಲ್ಲದಂಡೆಯ ಮೇಲೆ ಒಗೆಯುವಂತೆ ಮಾಡುತ್ತೇನೆಂದು, ಈಜಲು ಬಂದವರಿಗೆ ಮೊದಲಿನಂತೆ ಈಜಲು ಅವಕಾಶ ಕಲ್ಪಿಸಿಕೊಡುತ್ತೇನೆಂದು, ಸಂಕ್ರಮಣದ ದಿನ ತೆಪ್ಪದ ತೇರು ತಪ್ಪದೆ ತೇಲುವಂತೆ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟ ಕಾರಣದಿಂದಲೆ ಆಕೆ ಈ ಸಲ ಪಂಚಾಯತಿಗೆ ಆರಿಸಿ ಬಂದಿದ್ದಾಳೆ. ಇಂದಲ್ಲ ನಾಳೆ ತಮ್ಮೂರಿನ ಬಿಸಿಲು ಮಾಯವಾಗಿ, ಮಳೆ ಸುರಿದೀತು ಎಂದು ಕಾಯುತ್ತಿದ್ದಾರೆ. ದಿನಗಳೆದಂತೆ ಬಿಸಿಲಿನ ತಾಪ ಹೆಚ್ಚಾಗುತ್ತ ಹೊರಟಿತ್ತೆ ಹೊರತು ಕಡಿಮೆಯಾಗುವ ಲಕ್ಷಣಗಳಂತೂ ಕಾಣುತ್ತಿರಲಿಲ್ಲ. ಪ್ರತಿ ಗಳಿಗೆಗೊಮ್ಮೆ 'ಉಸ್ಸಪಾ' ಎಂದು ತೇಗುವ, ನಿಟ್ಟುಸಿರನ್ನು ಹೊರಹಾಕುವ ಮಂದಿಯನ್ನು ಅಲ್ಲಲ್ಲಿ ನೋಡಿ ಹೇಳಬಹುದಾಗಿತ್ತು. ಸಂಜೆಯಾಗಲಿಕ್ಕೆ ಬಂದಿದ್ದರೂ ರಣಗುಡುವ ಬಿಸಿಲಿನ ಕಾವು ಮಾತ್ರ ಇನ್ನೂ ಆರಿರಲಿಲ್ಲ. ಬೇಗೆಯೆಂಬುದು ಕಂಡಕಂಡ ಕಡೆ ಜಾಸ್ತಿಯಾಗಿದೆಯೊ ಅಥವಾ ಈ ಹೊಂಗಲನಾಡಿನಲ್ಲಿ ಮಾತ್ರ ಮಾದೇವ ತನ್ನ ಉರಿಗಣ್ಣನ್ನು ತೆರೆದಿರುವನೋ ಎಂದು ಜರ್ಜರಿತಗೊಂಡು 'ಯಪ್ಪಾ, ಏನ್ ಝಳಾಪಾ ಇದು, ನಿಂತ್ರ ನಿಂದರಲಿಕ್ಕೆ ಆಗವಲ್ಲದು, ಕುಂತ್ರ ಕುಂದ್ರಲಿಕ್ಕ ಆಗವಲ್ಲದು' ಎಂದು ಮಂದಿ, ಸಂತೆಯ ದಿನವಾಗಿದ್ದ ಇಂದು, ಒಂದೇ ಸಮನೆ ತಮ್ಮ ಕಣ್ಣಿಗೆ ಬಿದ್ದದ್ದನ್ನೆಲ್ಲ ಶಪಿಸುತ್ತಿದ್ದರು. ಎಷ್ಟು ಶಪಿಸಿದರೂ ತಲೆ, ಹಣೆ, ಹುಬ್ಬು, ಹೆಗಲು, ಕೊರಳು, ಕಂಕುಳುಗಳಿಂದ ಬಸಿಯುತ್ತಿದ್ದ ಅವರ ಬೆವರೇನೂ ಕಡಿಮೆಯಾಗಿರಲಿಲ್ಲ.

ಮೊದಲು ಈ ಸುತ್ತಮುತ್ತಲೆಲ್ಲ ನಿಂತಲ್ಲಿ, ನೋಡಿದಲ್ಲಿ ಎಷ್ಟೆಲ್ಲ ಗಿಡ ಮರಗಳಿದ್ದವಲ್ಲ ಎಂದು ಅನೇಕರಿಗೆ ಅನ್ನಿಸುವುದಾದರೂ ಅದು ಹೌದೋ, ಅಲ್ಲವೋ ಎಂಬಂತೆ ಅವರ ನೆನಪು ಕೂಡ ಇತ್ತೀಚೆಗೆ ಕಳೆದುಹೋಗತೊಡಗಿತ್ತು. ಈಗಿನವರಿಗೆ ಅದನ್ನು ಹೇಳಿದರೂ ಅವರು ನಂಬದ ಸ್ಥಿತಿ ನಿರ್ಮಾಣವಾಗತೊಡಗಿತ್ತು. ಬೈಲಹೊಂಗಲದ ಈ ಬೇಸಿಗೆಯಲ್ಲಿ ಬಿಸಿಲಿನ ತಾಪ ಒಂದು ಕಡೆಯಾದರೆ ಗಿಜಿಗಿಡುವ ಜನರನ್ನು ತೂರಿಕೊಂಡು ಸಂತೆ ಪ್ಯಾಟಿ ಮಾಡುವುದು ಕೂಡ ಒಂದು ಸಾಹಸದ ಕೆಲಸವಾಗಿತ್ತು. ಕಿಕ್ಕಿರಿದು ತುಂಬಿಕೊಂಡು ಬರುವ ಬಸ್ಸಿನಲ್ಲಿ ಬಂದು ವಾರದ ಸಂತೆಯನ್ನು ಚೀಲದಲ್ಲಿ ಒಯ್ಯುವುದು ಹಗರ ಮಾತೇನೂ ಆಗಿರಲಿಲ್ಲ. ಈ ಸಂತೆಯನ್ನು ಮಾಡುವ ಸಲುವಾಗಿಯೇ ಅನೇಕ ದೊಡ್ಡ ದೊಡ್ಡ ಮನೆತನಗಳು ಬಿದ್ದಿದ್ದವು. ಹಿಂದೆ ಹೊಂಗಲಕ್ಕೆ ಹೋಗಿ ಸಂತೆಯನ್ನು ಮಾಡಿಕೊಂಡು ಬರುವವನನ್ನು ಆಶ್ಚರ್ಯದಿಂದ ನೋಡುತ್ತಿದ್ದ ದಿನಗಳೂ ಇದ್ದವು. ನಾಳೆ ಸಂತೆ ಇದೆಯೆಂದರೆ ಇವತ್ತು ಮಧ್ಯಾಹ್ನದಿಂದಲೇ ಅವನು ಹೋಗುವ ತಯಾರಿ ನಡೆದಿರುತ್ತಿತ್ತು. ಅವನು ನಡೆಯುವ ಗತ್ತು, ಮಸರಾಯಿ ಧೋತರವನ್ನು ಉಟ್ಟುಕೊಳ್ಳುವ ರೀತಿ, ಧೋತರ ತೆಳುವಾಗಿರುತ್ತಿದ್ದುದರಿಂದ ಅದನ್ನು ಉಟ್ಟುಕೊಳ್ಳುವ ಮೊದಲು ಹಾಕಿಕೊಳ್ಳುವ ಪಟ್ಟಿಪಟ್ಟಿಯ ಉದ್ದ ಚಡ್ಡಿಯ ಗೀರುಗಳು, ಸಂತೆಯ ದಿನವಷ್ಟೆ ಅಲ್ಲ, ವಾರದಲ್ಲಿ ನಾಲ್ಕೈದು ದಿನ ಜಾತ್ರೆ, ಉರುಸು, ಉಪವಾಸ, ಪೀಠಾರೋಹಣ, ಪಲ್ಲಕ್ಕಿ ಉತ್ಸವಗಳಿಗೆಂದು ರಸ್ತೆ, ಬಸ್‌ನಿಲ್ದಾಣ, ಹೊಟೇಲುಗಳು ಯಾವಾಗಲೂ ಗಿಜಿಗಿಜಿ ಎನ್ನುತ್ತಿದ್ದವು. ಇವತ್ತಿನ ಜನಜಂಗುಳಿಯನ್ನು ನೋಡಿದರಂತೂ ಜಗತ್ತಿನ ಜನರೆಲ್ಲ ಈ ಊರಿಗೆ ಬಂದಿದ್ದಾರೇನೋ ಎನ್ನುವಷ್ಟು ಬರೀ ಮನುಷ್ಯ ಮುಖಗಳೆ ಗೋಚರಿಸುತ್ತಿದ್ದವು. ಆ ಮುಖಗಳು ಸಹ ವಿಧವಿಧ! ನೋಡಿದರೆ ಒಬ್ಬರಂತೆ ಒಬ್ಬರಿಲ್ಲ. ವರ್ತುಲಾಕಾರ, ಚೌಕಾಕಾರ ಮತ್ತು ಆಯತಾಕಾರದ ಮುಖಮುದ್ರೆಗಳು ಒಂದಕ್ಕಿಂತ ಒಂದು ಭಿನ್ನವಾಗಿ ತೋರುವವು.

ಮನಸ್ಸಿನಾಳದಲ್ಲಿ ಆಗಿಂದಾಗ ಉತ್ಪತ್ತಿಯಾಗುತ್ತಿದ್ದ ತಳಮಳ, ತಲ್ಲಣ, ಸಂಕೋಚಗಳನ್ನು ತೆರೆದಿಡುತ್ತಿದ್ದ ಆ ಉದ್ದ, ಅಡ್ಡ, ಚಪ್ಪಟೆ, ಚೂಪು ಮತ್ತು ಕಿಸಮೂಗುಗಳೇನು? ಎದೆಯ ಬೇಗುದಿಗೆ ಹಿಗ್ಗುವ ಹಾಗೂ ಕುಗ್ಗುವ ಮೂಗಿನ ಹೊಳ್ಳೆಗಳೇನು? ತಮ್ಮ ಆಸೆ, ಅಪೇಕ್ಷೆಗಳು ಎಂದಾದರೂ ಈಡೇರುವವೋ ಅಥವಾ ನಡುಹೊಳೆಯಲ್ಲಿಯೇ ಮುಳುಗುವವೋ ಎಂದು ಬದುಕನಾವೆಗಳನ್ನು ತಮ್ಮ ಕಣ್ಣಕಡಲಿನಲ್ಲಿ ತೂಗುತ್ತಿರುವ ಸಣ್ಣ, ಅಗಲ ಮತ್ತು ಕಿರುಗಣ್ಣುಗಳ ವಾರೆನೋಟಗಳೇನು? ಕಿರಿದಾದ, ಉದ್ದವಾದ, ಉಬ್ಬಿದ ಮತ್ತು ತಗ್ಗಿದ ಹಣೆಗಳಲ್ಲಿ ಮೂಡುವ ಮಡಿಕೆಗಳೇನು? ಈ ಮಂದಿಗೆ ಬೇರೆ ಊರುಗಳಿಲ್ಲವೆ? ಸಾಯಲು ಈ ಸೀಮೆಯೇ ಬೇಕಾಗಿದೆಯೆ? ಬೈಲಹೊಂಗಲ ಬಸ್‌ಸ್ಟ್ಯಾಂಡಿನ ಒಳಗೆ ಹೋಗಿ ನಿಲ್ಲುವುದು ಬಿಡಿ, ಒಂದು ಕಾಲಿಡಲು ಸಹ ಜಾಗವಿಲ್ಲದ್ದಷ್ಟು ಅದು ತುಂಬಿತುಳುಕುತ್ತಿತ್ತು. ಅದಕ್ಕಾಗಿ ಚಾದಂಗಡಿಯ ನೆರಳು, ಟ್ರಕ್, ಟೆಂಪೊ ಮತ್ತು ಬಸ್ಸುಗಳು ನಿಂತುಕೊಂಡು ಉಂಟಾಗಿದ್ದ ವಿರಳ ನೆರಳು, ಜನರ ಗುಂಪೊಂದು ನಿಂತಿದ್ದಕ್ಕೆ ಉಂಟಾಗಿದ್ದ ನೆರಳು ಹೀಗೆ ಎಲ್ಲಿ ನೆರಳು ಕಾಣುತ್ತದೆಯೋ, ಎಲ್ಲಿ ಸ್ವಲ್ಪ ಗಾಳಿ ಬೀಸುತ್ತದೆಯೆಂದು ಅನಿಸುತ್ತದೆಯೋ ಅಲ್ಲಿಗೆ ಮಂದಿ ಮೆಲ್ಲಗೆ ಹೋಗಿ ನಿಲ್ಲುವುದನ್ನು ನೋಡಬಹುದಾಗಿದ್ದಿತು. ಅವರು ಅರಸಿಕೊಂಡು ಹೋಗುವ ನೆರಳು ಕೂಡ ಎಷ್ಟೊಂದು ಕೃತಕ ಮತ್ತು ತಾತ್ಕಾಲಿಕವಾಗಿತ್ತೆಂದರೆ ಮಂದಿ ಆಚೆಈಚೆ ಸರಿದ ಕೂಡಲೆ ಅಥವಾ ವಾಹನಗಳು ಅಲ್ಲಿಂದ ಕದಡಿದ ಕೂಡಲೆ ಬಿಸಿಲಿನ ಪಂಜರ ಮತ್ತೆ ಅವರನ್ನು ಆವರಿಸುತ್ತಿತ್ತು. ನಿರ್ವಾಹವಿಲ್ಲದೆ ಜನರು ಮತ್ತೆ ಅಂತಹ ಇನ್ನೊಂದು ನೆರಳನ್ನು ಹುಡುಕುವ ಕಾಯಕದಲ್ಲಿ ತೊಡಗುತ್ತಿದ್ದರು. ತಮ್ಮ ವಾಹನದ ನೆರಳಿಗೆ ಬಂದು ತುಸು ಸಾಂತ್ವನಗೊಳ್ಳುತ್ತಿದ್ದ ಮಂದಿಯನ್ನು ಆ ವಾಹನಗಳ ಮಾಲೀಕರು ದುರುಗುಟ್ಟಿ ನೋಡಿ ಅವರ ಆ ಕ್ಷಣದ ನೆಮ್ಮದಿಯನ್ನು ಕಸಿಯುತ್ತಿದ್ದರು.

ಹೊಂಗಲ ಬಸ್‌ಸ್ಟ್ಯಾಂಡಿನ ತಾರಸಿಯೆನ್ನುವುದು ರೊಟ್ಟಿಯ ಹಂಚಿನಂತೆ ಸುಡುತ್ತದೆಯೆನ್ನುವುದು ಅಲ್ಲಿಗೆ ಹೋಗಿ ನಿಂತವರಿಗೆ ಗೊತ್ತು. ನೆರಳಿನ ಆಶ್ರಯ ಬಯಸಿ ಅದರೊಳಗೆ ಬಂದ ಜನರು ಸುತ್ತಲಿನ ತಾಪಕ್ಕೆ ಕುದಿಯುತ್ತ ಹೇಳಲಾರದ ಅಹಿತ ಅನುಭವಿಸುತ್ತಿದ್ದರು. ಹಳೆ ಶಿಲಾಯುಗದಿಂದಲೆ ಈ ಕಟ್ಟಡದ ಭಾರವನ್ನು ಹೊತ್ತಿರುವಂತೆ ತೋರುತ್ತಿದ್ದ ಬಸ್‌ಸ್ಟ್ಯಾಂಡಿನ ಕಂಬಗಳು ತಾವು ಹೊತ್ತು ನಿಂತಿರುವ ತಾಪವನ್ನೂ ಮತ್ತು ನೆಲದಿಂದೇಳುತ್ತಿದ್ದ ಪ್ರಕ್ಷುಬ್ಧತೆಯನ್ನೂ ಅರಗಿಸಿಕೊಳ್ಳಲಾರದೆ ಅಲ್ಲಲ್ಲಿ ಸೀಳುಬಿಟ್ಟಿದ್ದವು. ಕೆಲವು ಕಡೆ ಸಿಮೆಂಟ್ ಕಿತ್ತುಹೋಗಿ ಒಳಗಿನ ಕಲ್ಲುಖಡಿ ಕಬ್ಬಿಣ ಕಾಣತೊಡಗಿದ್ದವು. ಬಾಗಿದ, ಸೀಳುಬಿಟ್ಟ, ಕುಸಿದ ಕಂಬಗಳನ್ನು ನೋಡುತ್ತ, ಕಬ್ಬಿಣದ ಸರಳು ಹೊರಗೆ ಬರುವುದೇನೋ ಎಂದು ಅದನ್ನು ಬಲವಾಗಿ ಜಗ್ಗುತ್ತ ಕೆಲವರು ಸಮಯ ಸರಿಸುತ್ತಿದ್ದರು. ಕರಿಕಲ್ಲಿನ ಖಡಿಯೊಂದನ್ನು ಅದು ವಜ್ರದ ತುಣುಕೇನೋ